


ದುರಾದೃಷ್ಟವನ್ನು ಮನೆಯೊಳಗೆ ಪ್ರವೇಶಿಸದಂತೆ ಮುಂಬಾಗಿಲಿನ ಚೌಕಟ್ಟಿನ ಎರಡೂ ಬದಿಗಳಲ್ಲಿ, ಹೊಸ ವರ್ಷದ ದ್ವಿಪದಿ (Spring Couplets)ಗಳನ್ನು ಅಂಟಿಸುತ್ತಾರೆ. ಮನೆಯೊಳಗೆ, ಹೊಸ ವರ್ಷದಲ್ಲಿ ಶುಭ ತರುವ ಹುಂಜ, ಹೂವು ಮತ್ತು ಪಕ್ಷಿ ಅಥವಾ 'ಗ್ವಾನ್ ಯಿನ್' ದೇವತೆ ಮತ್ತು ಎರಡು ಆರೋಗ್ಯವಂತ ಗಂಡು ಹುಡುಗರ ಚಿತ್ರಗಳಿರುವ ವರ್ಣಚಿತ್ರಗಳನ್ನು ಗೋಡೆಗಳ ಮೇಲೆ ತೂಗುಬಿಡುತ್ತಾರೆ. ಕಿಟಕಿಗಳ ಮೇಲೆ ಪುರಾಣ, ದಂತಕಥೆ ಅಥವಾ ಚೀನೀ ಸಂಗೀತ ನಾಟಕದ ದೃಶ್ಯಗಳಿರುವ, ಕಾಗದದ ಕೆಂಪು ಬಣ್ಣದ ಕಟೌಟುಗಳನ್ನು ಹಚ್ಚುತ್ತಾರೆ.

ಪ್ರತಿ ಕುಟುಂಬದಲ್ಲಿ ಅಜ್ಜ, ಅಜ್ಜಿಯರು, ತಂದೆ ತಾಯಂದಿರು, ತಮ್ಮ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ಹಣದ ಕೆಂಪು ಲಕೋಟೆಗಳನ್ನು ಕೊಡುವುದರೊಂದಿಗೆ, ಹೊಸ ವರ್ಷದ ಆರೋಗ್ಯ, ಸಮೃದ್ಧಿ, ಯಶಸ್ಸು ಹಾಗೂ ಅದೃಷ್ಟಗಳನ್ನು ಕೋರುತ್ತಾರೆ. ಈ ಕೆಂಪು ಲಕೋಟೆಗಳನ್ನು, ಹೊಂಗಬಾವೊ (Hongbao) ಎಂದು ಕರೆಯುತ್ತಾರೆ.

ಚೀನೀಯರು ಕುಟುಂಬಪ್ರಿಯರು. ಹೊಸ ವರ್ಷದಂದು ಮತ್ತು ಅದರ ಮುನ್ನಾ ದಿನವೆಂದರೆ, ಸಂಬಂಧಗಳ ಸುವರ್ಣ ಕೊಂಡಿಗಳನ್ನು ಮತ್ತೆ ಬೆಸೆದುಕೊಳ್ಳುವ ಒಂದು ವಿಶೇಷ ಸಂದರ್ಭ. ಹೊಸ ವರ್ಷದ ಮುನ್ನಾ ದಿನದ ಸಂಜೆ ದೂರ ದೂರದಲ್ಲಿರುವ ಕುಟುಂಬದ ಸದಸ್ಯರೆಲ್ಲರೂ ಒಂದೆಡೆ ಕಲೆತು ಮಾಡುವ ವಿಶೇಷ ಭೋಜನ ಕೂಟವನ್ನು ಪುನರ್ಮಿಲನ ಭೋಜನ (Reunion Dinner) ಎಂದು ಕರೆಯುತ್ತಾರೆ.

ಈ ಭೋಜನವು, ಹಬ್ಬದ ಅತ್ಯಂತ ಮಹತ್ವದ ಒಂದು ಸಂಪ್ರದಾಯ. ಚೀನೀ ಸಂಪ್ರದಾಯದಲ್ಲಿ ಸಮೃದ್ಧಿಯ ಸಂಕೇತವಾದ ಮೀನು, ಚಟುವಟಿಕೆಯ ಮನೋಭಾವದ ಸಂಕೇತವಾದ ಲೆಟ್ಯೂಸ್ ತರಕಾರಿ ಸೊಪ್ಪು, ಜ್ಞಾನದ ಸಂಕೇತವಾದ ಕಿರು ಈರುಳ್ಳಿಗಳು, ಪರಿಶ್ರಮ ಹಾಗೂ ಕಾರ್ಯತತ್ಪರತೆಗಳ ಸಂಕೇತವಾದ ಸೆಲರಿ (Celery)ತರಕಾರಿ, ಕೋಳಿ ಮತ್ತು ಬಾತುಕೋಳಿಗಳ ಮಾಂಸ, ಸಂಪತ್ತಿನ ಸಂಕೇತವಾದ ಕಣಕದ ಖಾದ್ಯ (dumplings) ಇವು ಹಬ್ಬದ ಮುನ್ನಾ ದಿನದ ರಾತ್ರಿಯ ಭೋಜನಕೂಟದಲ್ಲಿ ಇರಲೇಬೇಕಾದ ಭಕ್ಷ್ಯಗಳು.

ಸಂಜೆ, ಸುಮಾರು ಎಂಟು ಘಂಟೆಯ ಹೊತ್ತಿಗೆ, ಹೊಸ ವರ್ಷವನ್ನು ಸ್ವಾಗತಿಸುವ ಸಾಂಪ್ರದಾಯಿಕ ಜಾನಪದ ಹಾಗೂ ಪಾಪ್ ಸಂಗೀತ ಸಮಾರಂಭಗಳು ಆರಂಭಗೊಂಡರೆ, ಅದಕ್ಕೆ ತೆರೆ ಬೀಳುವುದು ಮಧ್ಯರಾತ್ರಿಯ ನಂತರವೇ. ಈ ಸಮಾರಂಭಗಳಲ್ಲಿ, ಜನಪ್ರಿಯ ಹಾಡುಗಾರರು ಅಷ್ಟೇ ಅಲ್ಲದೇ ಹೆಸರಾಂತ ನರ್ತಕ– ನರ್ತಕಿಯರು ಹಾಗೂ ನುರಿತ ಲಾಗಪಟುಗಳು (Acrobats) ಪಾಲ್ಗೊಂಡು, ಉತ್ಸವದ ಹುರುಪಿಗೆ ಸಂಗೀತ ಮತ್ತು ಕಲಾ ಪ್ರದರ್ಶನಗಳ ಮೆರುಗು ನೀಡುತ್ತಾರೆ.

ಗಂಟೆಯು ಚೀನೀಯರ ಹೊಸ ವರ್ಷದ ಸಾಂಪ್ರದಾಯಿಕ ಚಿಹ್ನೆ. ಗಂಟೆಯ ನಾದ, ದುರಾದೃಷ್ಟವನ್ನೆಲ್ಲ ಓಡಿಸಿ, ಒಳ್ಳೆಯ ಯೋಗವನ್ನು ತರುತ್ತದೆಯೆಂದು ಪ್ರತೀತಿಯಿದೆ. ಅಂತೆಯೇ, ದೇವಸ್ಥಾನಗಳಲ್ಲಿ, ಹೊಸ ವರ್ಷದ ಆಗಮನವನ್ನು ಸೂಚಿಸಲು ಬಾರಿಸುವ ವಿಶೇಷ ಗಂಟೆಗಳ ನಾದವನ್ನು ಕೇಳಲು ಜನ ಉತ್ಸುಕತೆಯಿಂದ ಕಾದಿರುತ್ತಾರೆ.

## ಹೊಸ ವರ್ಷದ ದಿನ

ಹೊಸ ವರ್ಷದ ದಿನದಂದು ಮಾಡುವ ಒಳ್ಳೆಯ, ಶುಭ ಸೂಚಕ ಕೆಲಸಗಳು, ವರ್ಷವಿಡೀ ಮಾಡುವ ಕೆಲಸಗಳ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದು ಚೀನೀಯರ ಧೃಡ ವಿಶ್ವಾಸ. ಅಂತೆಯೇ, ಆ ದಿನ ಪ್ರಾರ್ಥನೆ, ಬಂಧು ಬಳಗದ ಭೇಟಿ, ಸಿಂಹದ ಹಾಗೂ ಡ್ರ್ಯಾಗನ್ ನೃತ್ಯಗಳ ವೀಕ್ಷಣೆ, ಸಾಂಪ್ರದಾಯಿಕ ಆಹಾರ ಸೇವನೆ ಇವೇ ಮುಂತಾದ ಸಂತೋಷದಾಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಹೊಸ ವರ್ಷದ ಸ್ವಾಗತವು, ಅದ್ದೂರಿಯ ಬೆಳಕಿನ ಪಟಾಕಿಗಳ ಅದ್ಭುತ ಪ್ರದರ್ಶನಗಳಿಂದ ಮೊದಲುಗೊಳ್ಳುತ್ತದೆ. ಹೊಸ ವರ್ಷದ ಮೊದಲ ದಿನದಂದು, ಚೀನೀಯರು ತಮ್ಮ ಪೂರ್ವಜರಿಗೆ ಗೌರವ ತೋರಲು ಬಗೆಬಗೆಯ ಆಹಾರ, ತಿಂಡಿ, ತಿನಿಸುಗಳನ್ನು ಅರ್ಪಿಸುತ್ತಾರೆ. ಹಬ್ಬಕ್ಕಾಗಿ, ಹೆಣ್ಣುಮಕ್ಕಳು ಚೌಂಗಸ್ಸಾಮ (Cheongsam) ಹಾಗೂ ಗಂಡುಮಕ್ಕಳು, ಚೊಂಗ್ಶ್ಯಾನ (Changshan) ವನ್ನು ಧರಿಸಿ, ಕುಟುಂಬದ ಸದಸ್ಯರು, ಸ್ನೇಹಿತರು ಹಾಗೂ ನೆರೆ ಹೊರೆಯವರಿಗೆ, ಗೊಂಗ್ಷಿ ಫಾ ಚಾಯ್ (Gong Xi Fa Cai) ಎಂದು ಹಾರೈಸುತ್ತ, ಜೋಡಿ ಕಿತ್ತಳೆ ಹಣ್ಣುಗಳ ವಿನಿಮಯದೊಂದಿಗೆ ಶುಭಾಶಯಗಳನ್ನು

ವಿಶೇಷ ಭಕ್ಷ್ಯಗಳು

